CoverageReport: TCS IT Wiz – Bangalore Edition

**Publication:** Kannada Prabha
**Date:** 30/07/2014
**Edition:** Bangalore
**Page No:** 4
**Headline:** TCS IT WIZ

# ಟಿಸಿಎಸ್ ಐಟಿ ವಿಜ್

ಬೆಂಗಳೂರು: ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್ 'ಟಿಸಿಎಸ್ ಐಟಿ ವಿಜ್ 2014' ರಸಪ್ರಶ್ನೆ ಸ್ಪರ್ಧೆಯ ಬೆಂಗಳೂರು ಆವೃತ್ತಿ ಆ.7ರಂದು ಚೌಡಯ್ಯ ಸ್ಮಾರಕ ಭವನದಲ್ಲಿ ನಡೆಯಲಿದೆ. ಎಂಟನೇ ತರಗತಿಯಿಂದ ಆರಂಭಿಸಿ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳು ಭಾಗವಹಿಸಬಹುದು. ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ ಯಾವುದೇ ಶುಲ್ಕವಿರುವುದಿಲ್ಲ. ಪ್ರತಿಯೊಂದು ಶಾಲೆ, ಕಾಲೇಜಿನಿಂದ ಇಬ್ಬರು ವಿದ್ಯಾರ್ಥಿಗಳನ್ನೊಳಗೊಂಡ 10 ತಂಡಗಳನ್ನು ಸ್ಪರ್ಧೆಗೆ ಕಳುಹಿಸಲು ಅವಕಾಶವಿದೆ. ಐಸಿಎಸ್ ಐಟಿ ವಿಜ್ 2014 ರಸಪ್ರಶ್ನೆ ಸ್ಪರ್ಧೆ ಭಾರತದ 14 ಸ್ಥಳಗಳಲ್ಲಿ ನಡೆಯುತ್ತದೆ. ಅಹಮದಾಬಾದ್, ಬೆಂಗಳೂರು, ಭುವನೇಶ್ವರ, ಚೆನ್ನೈ, ಕೊಯಮತ್ತೂರು, ದೆಹಲಿ, ಹೈದರಾಬಾದ್, ಇಂದೋರ್, ಕೊಚ್ಚಿ, ಕೋಲ್ಕತಾ, ಲಖನೌ, ಮುಂಬೈ, ನಾಗಪುರ ಮತ್ತು ಪುಣೆಯಲ್ಲಿ ಸ್ಪರ್ಧೆ ನಡೆಯುತ್ತದೆ. ಆಸಕ್ತ ವಿದ್ಯಾರ್ಥಿಗಳು, ತಮ್ಮ ಪ್ರೌಢ ಶಾಲೆ, ಕಾಲೇಜು ಮೂಲಕವೇ ಪ್ರವೇಶ ಪತ್ರವನ್ನು ಆ.4ರಂದು ಅಥವಾ ಅದಕ್ಕೂ ಮುನ್ನವೇ ರವಾನಿಸಬೇಕು. ವಿಳಾಸ- ಟಿಸಿಎಸ್ ಐಟಿ ವಿಜ್ ಕಾರಿಡಾರ್, ಟಾಟಾ ಕನ್ಸಲ್ಟೆನ್ಸಿ ಸರ್ವೀಸಸ್, ಎಸ್‌ಜೆಎಂ ಟವರ್, ನಂ. 18, ಶೇಷಾದ್ರಿ ರಸ್ತೆ, ಗಾಂಧಿ ನಗರ. 080–67246000. ವೆಬ್‌ಸೈಟ್–www.tcsitwiz.com